

ಕಲ್ಪನಾ ವಿಲಾಸ ಕಾಮಕೂಟದಲ್ಲಿ ಸಹಜ ಎಂದು ಹೇಳಿದರೆ ಜೇನುಗೂಡಿಗೆ ಕಲ್ಲು ಹೊಡೆದಂತಾಗಬಹುದು. ಆದರೆ ಕಾಮದ ಬಗೆಗೆ ಮುಕ್ತವಾಗಿ ಚರ್ಚೆ ಮಾಡುವಾಗ ಇದನ್ನು ಮರೆಮಾಚಿದರೆ ವಾಸ್ತವದಿಂದ ಓಡಿಹೋದಂತಾಗುತ್ತದೆ. ಮದುವೆಯಾಗುವ ಮೊದಲು ಹಸ್ತಮೈಥುನದಲ್ಲಿ ಸುಖ ಕಾಣುವವರೆಲ್ಲರೂ ಕಲ್ಪನೆಯ ಆಸರೆ ಪಡೆದಿರುತ್ತಾರೆ. ಮದುವೆಯಾದ ತಕ್ಷಣ ಅಂತಹ ಕಲ್ಪನೆಗಳೆಲ್ಲವನ್ನೂ ತಲೆಯಿಂದ ತೆಗೆದುಹಾಕುವುದು ಅಸಾಧ್ಯ. ಹಸ್ತಮೈಥುನ ಮಾಡದಿರುವವರಲ್ಲಿಯೂ ಲೈಂಗಿಕತೆ ತನ್ನದೇ ಆದ ಚಿತ್ರಗಳನ್ನು ಮೂಡಿಸಿರುತ್ತದೆ. ವಿವಾಹಪೂರ್ವದಲ್ಲಿ ನಮ್ಮಲ್ಲಿ ಮೂಡಿರುವ ಲೈಂಗಿಕತೆಯ ಕಲ್ಪನೆಗಳಿಗೆ ಸಂಗಾತಿಯನ್ನು ಜೋಡಿಸುವ ಪ್ರಯತ್ನವೂ ಕೂಡ ಸಹಜ ಮತ್ತು ಅನಿವಾರ್ಯವಾದ ಬೆಳವಣಿಗೆ.

ನಮಗೆಲ್ಲರಿಗೂ ಇರುವ ವಿಶಿಷ್ಟವಾದ ಕಾಮದ ಕಲ್ಪನೆಗಳನ್ನು ಸಂಗಾತಿಯ ಎದುರು ಬಿಚ್ಚಿಡುವುದು ಸುಲಭವಲ್ಲ. ಹಾಗಿದ್ದರೂ ಇವು ಇರುತ್ತವೆ ಎಂದು ನಮಗೆಲ್ಲರಿಗೂ ಗೊತ್ತಿರುತ್ತದೆ. ದಾಂಪತ್ಯ ಅಥವಾ ಲೈಂಗಿಕ ಚಿಕಿತ್ಸೆಗಾಗಿ ಬರುವ ಹಲವಾರು ದಂಪತಿಗಳು ಗುಟ್ಟಾಗಿ ಇದನ್ನು ಒಪ್ಪಿಕೊಳ್ಳುತ್ತಾರೆ. ನಮ್ಮ ಮನಸ್ಸಿನಲ್ಲಿ ಬೇರೆಲ್ಲ ವಿಚಾರಗಳ ಬಗೆಗೆ ಕಲ್ಪನೆಗಳು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿರುವಾಗ ಕಾಮವೊಂದನ್ನೆ ಅದಕ್ಕೆ ಹೊರತಾಗಿಸುವುದು ವ್ಯರ್ಥಪ್ರಯತ್ನವಾಗುತ್ತದೆ. ಇತರ ವಿಷಯಗಳ ಕಲ್ಪನೆಯನ್ನು ವಾಸ್ತವವಾಗಿಸಲು ಎಲ್ಲರೂ ಪ್ರಯತ್ನಿಸಬಹುದು. ಆದರೆ ಕಾಮದ ಕಲ್ಪನೆಗಳನ್ನು ಎಲ್ಲರೂ ಕಲ್ಪನೆಯಾಗಿಯೇ ಆನಂದಿಸಲು ಇಷ್ಟಪಡುತ್ತಾರೆ. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ ಎಂಬ ಅಡಿಗರ ಮಾತು ಕಾಮಕೂಟಗಳಿಗೂ ಅನ್ವಯಿಸುತ್ತದೆ. ಇದನ್ನು ಮುಂದುವರೆಸಿ ಹೇಳುವುದಾದರೆ ತುಡಿತದ ಜೊತೆಗೆ ಇರದುದರ ಬಗೆಗೆ ಕಲ್ಪಿಸಿಕೊಳ್ಳುವುದೂ ಕೂಡ ಅಷ್ಟೇ ಸಹಜ.

ದಾಂಪತ್ಯದ ಕಾಮಕೂಟದಲ್ಲಿ ಹೊಸತನ ಬೇಕೆನಿಸಿದಾಗ ಸಾಕಷ್ಟು ದಂಪತಿಗಳು ಕಲ್ಪನೆಗಳ ಮೊರೆಹೋಗುತ್ತಾರೆ. ಕಲ್ಪನೆಗಳು ಉಡುಪು, ಸ್ಥಳ, ಸಂದರ್ಭಗಳ ಬಗೆಗೆ ಮಾತ್ರ ಇದ್ದಾಗ ಹೆಚ್ಚಿನ ಗೊಂದಲಗಳಿರುವುದಿಲ್ಲ. ಆದರೆ ಎದುರಿಗಿರುವ ವ್ಯಕ್ತಿಯೇ ಬದಲಾಗಿ ಹೋಗುವಾಗ ನೂರಾರು ನೈತಿಕ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಮಾನಸಿಕ ವ್ಯಭಿಚಾರ ಕೂಡ ಅನೈತಿಕವಾದದ್ದು ಎಂದು ಎಲ್ಲ ಧರ್ಮಗಳೂ ಅದನ್ನು ವಿರೋಧಿಸುತ್ತವೆ. ಕೆಲವೊಮ್ಮೆ ಕಲ್ಪನೆಯಲ್ಲಿ ಬೇರೊಬ್ಬ ವ್ಯಕ್ತಿಯ ಜೊತೆಗೆ ಇರುವಾಗ ಪಾಪಪ್ರಜ್ಞೆ ಮೂಡಿ ಅವರು ಕೂಟದ ಆಸಕ್ತಿಯನ್ನೇ ಕಳೆದುಕೊಳ್ಳುವ ಸಾಧ್ಯತೆಗಳಿರುತ್ತವೆ.

ಈ ವಿಚಾರದಲ್ಲಿ ಸಾರ್ವಜನಿಕವಾಗಿ ಸರಿತಪ್ಪುಗಳನ್ನು ನಿರ್ಧರಿಸಲಾಗುವುದಿಲ್ಲ. ದಂಪತಿಗಳು ತಮ್ಮ ಕಲ್ಪನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು, ಸಂಗಾತಿಯ ಕಲ್ಪನೆಗಳನ್ನು ಸಹಜವೆಂದು ಸ್ವೀಕರಿಸಲು ಮತ್ತು ಸಾಧ್ಯವಿದ್ದರೆ ಅದರಲ್ಲಿ ಪಾಲುಗೊಳ್ಳಲು ಸಿದ್ಧರಿದ್ದಾಗ ಲೈಂಗಿಕತೆಗೆ ಇದು ವರವಾಗಬಲ್ಲದು. ಆದರೆ ಒಬ್ಬರೇ ಆನಂದಿಸುವ ಕಲ್ಪನೆಗಳು ಕೂಟದಲ್ಲಿ ದಂಪತಿಗಳ ನಡುವಿನ ಸಂಪರ್ಕವನ್ನು ಕಡಿದುಹಾಕಿ ಲೈಂಗಿಕತೆಯ ಜೀವಂತಿಕೆಯನ್ನು ಹಾಳುಮಾಡುತ್ತದೆ. ಕಲ್ಪನೆಗಳ ಮೊರೆಹೋಗದೆ ವಾಸ್ತವದಲ್ಲಿ ಕಾಮಕೂಟವನ್ನು ಆಸಕ್ತಿದಾಯಕವಾಗಿಸಿಕೊಳ್ಳುವುದು ದಂಪತಿಗಳಿಗೆ ಅತ್ಯುತ್ತಮ ಮಾರ್ಗವಾದರೂ ಇದು ಸಾಧ್ಯವೇ ಎನ್ನುವ ಪ್ರಶ್ನೆಗೆ ಖಚಿತ ಉತ್ತರಗಳಿಲ್ಲ.

ಎಸ್ತರ್ ಪೆರೇಲ್ ಹೇಳುತ್ತಾರೆ 'ಕಲ್ಪನೆಗಳನ್ನು ಕಾವ್ಯದಂತೆ ಅರ್ಥಮಾಡಿಕೊಳ್ಳಿ, ಗದ್ಯದಂತಲ್ಲ' ಎಂದು. ಉದಾಹರಣೆಗೆ ರನ್ನನ ಗದಾಯುದ್ಧ ನಾಟಕದಲ್ಲಿನ ಪ್ರಸಂಗವೊಂದನ್ನು ನೆನಪಿಸುತ್ತೇನೆ. ವೈಶಂಪಾಯನ ಸರೋವರದಲ್ಲಿ ಅಡಗಿದ್ದ ದುರ್ಯೋಧನನನ್ನು ಭೀಮ ಕುರುಕುಲ ಕುನ್ನಿ ಎಂದು ಸಂಬೋಧಿಸಿ ಹೊರಗೆ ಕರೆದಾಗ ಕೂಳ್ ಕುದಿವಂತೆ ಕುದಿದವನಿಮಿಶತತಿಗಳ್ ಎಂದು ರನ್ನ ವರ್ಣಿಸುತ್ತಾನೆ. ಭೀಮನ ಕೋಪಾಗ್ನಿಗೆ ಸರೋವರದ ಜಲಚರಗಳು ಅನ್ನದ ಅಗುಳಿನಂತೆ ಕುದಿಯುವುದು ನಿಜವಾಗಿ ಸಾಧ್ಯವೇ? ಹಾಗಿದ್ದರೂ ಕಾವ್ಯವಾಗಿ ಇದು ನೀಡುವ ಆನಂದಕ್ಕೆ ಕೊರತೆಯಾಗುತ್ತದೆಯೇ? ಹಾಗೆಯೇ ಕಾಮದ ಕಲ್ಪನೆಗಳಿಗೆ ಶಬ್ದಾರ್ಥವನ್ನು ನೀಡಿ ಅಭಾಸಕ್ಕೆ ಎಡೆಗೊಡಬಾರದು.



ಕಂಪೆನಿಗಳು ಭಾರಿ ಪ್ರಚಾರದ ಮೂಲಕ ನಮ್ಮೆಲ್ಲರ ತಲೆಯಲ್ಲಿ ಆದರ್ಶವಾದ ದೇಹದ ಕಲ್ಪನೆಗಳನ್ನು ಬಿತ್ತಿದ್ದಾರೆ. ಇದನ್ನೆ ಸತ್ಯವೆಂದು ನಂಬಿ ನಾವೆಲ್ಲಾ ನಮ್ಮ ಬಗೆಗೇ ನಾಚಿಕೆಪಟ್ಟುಕೊಳ್ಳುತ್ತಾ ಅನಗತ್ಯವಾದ ಕೆಲವೊಮ್ಮೆ ಅಪಾಯಕಾರಿಯಾದ ಸೌಂದರ್ಯಸಾಧನಗಳಿಗೆ ಹಣಚೆಲ್ಲಿ ಮೋಸಹೋಗುತ್ತಿದ್ದೇವೆ. ಲೈಂಗಿಕ ತೃಪ್ತಿಗೂ, ಅಂಗಾಂಗಗಳ ಆಕಾರ ಗಾತ್ರಕ್ಕೂ ಸಂಬಂಧವೇ ಇರುವುದಿಲ್ಲ. ಅಂಗಾಂಗಗಳಿಗೆ ಪ್ರಾಮುಖ್ಯತೆ ನೀಡುವವರು ಸಂಗಾತಿಗೆ ಅವಮಾನ ಮಾಡುತ್ತಿರುತ್ತಾರೆ. ಅಂತಹ ಸಂಬಂಧದಲ್ಲಿ ಲೈಂಗಿಕ ತೃಪ್ತಿ ಹೇಗೆ ಸಾಧ್ಯ?

ದಾಂಪತ್ಯದಲ್ಲಿ ಪ್ರೀತಿ ಮುಖ್ಯ, ಕಾಮವಲ್ಲ ಎಂದು ಹೇಳುತ್ತಾ ಪುರುಷವರ್ಗ ಸ್ತ್ರೀಯರನ್ನು ನಾಲ್ಕು ಗೋಡೆಯ ಮಧ್ಯೆ ಬಂಧಿಸಿ ತಾನು ವಿವಾಹದ ಹೊರಗಿನ ಸಂಬಂಧಗಳನ್ನು ಮುಕ್ತವಾಗಿ ಅನುಭವಿಸುತ್ತಾ ಬಂದಿದೆ. ಇಪ್ಪತ್ತೊಂದನೆ ಶತಮಾನದಲ್ಲಿ ಕೇವಲ ಆದರ್ಶದ ಮಾತುಗಳನ್ನು ಹೇಳುತ್ತಾ ಸುಖೀ ಸಮಾಜವನ್ನು ಕಟ್ಟಲು ಸಾಧ್ಯವಿಲ್ಲ. ಸ್ತ್ರೀಯರಿಗೆ ಸಮಾನ ಅಧಿಕಾರ ಮತ್ತು ಗೌರವಗಳನ್ನು ಕೊಡಲೇಬೇಕಾಗಿದೆ. ಅದರ ಜೊತೆಗೆ ಸ್ತ್ರೀಯರ ಲೈಂಗಿಕತೆಯನ್ನೂ ಆರೋಗ್ಯಕರವೆಂದು ಗುರುತಿಸಬೇಕಾಗಿದೆ. ಇದರಿಂದ ತಮಗೂ ಒಂದೇ ಸಂಗಾತಿಯ ಜೊತೆ ಪೂರ್ಣ ಲೈಂಗಿಕ ಆನಂದವನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಪುರಷರು ನೆನಪಿಟ್ಟುಕೊಳ್ಳಬೇಕು. ಸ್ತ್ರೀಯರೂ ದಾಂಪತ್ಯದಂತಹ ಬದ್ಧ ಸಂಬಂಧಗಳಲ್ಲಿ ತಮ್ಮ ಲೈಂಗಿಕ ಶಕ್ತಿ ಮತ್ತು ಆಸಕ್ತಿಗಳನ್ನು ಪೂರ್ಣವಾಗಿ ವ್ಯಕ್ತಪಡಿಸಲು ಹಿಂಜರಿಯಬೇಕಾಗಿಲ್ಲ. ಬದ್ಧ ಸಂಬಂಧಗಳಲ್ಲಿನ ಲೈಂಗಿಕತೆ ನಮ್ಮ ತಲೆಗಳಲ್ಲಿ ಶತಮಾನಗಳಿಂದ ಬೇರೂರಿರುವ ಕೃತಕ ನಿಬಂಧನೆಗಳನ್ನು ಮೀರಿ ಸಂಪೂರ್ಣ ಮುಕ್ತವಾದಾಗ ಮದುವೆ ಎನ್ನುವ ವ್ಯವಸ್ಥೆ ಕೂಡ ಗಟ್ಟಿಯಾಗಿ ನಿಲ್ಲುತ್ತದೆ.

ದಂಪತಿಗಳ ಖಾಸಗೀ ಕೋಣೆ ಅವರದ್ದೇ ಸಾಮ್ರಾಜ್ಯ. ಪ್ರೀತಿ ಆನಂದವನ್ನು ಹಂಚಿಕೊಳ್ಳಲು ಇಲ್ಲಿ ನಡೆಯುವುದೆಲ್ಲವೂ ನೈತಿಕ.

**(ಲೇಖಕರ ಮೊಬೈಲ್ 9480505258)**